**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**

**ಸಿ.ಸಿ.2200/2024**

| | | |
|---|---|---|
| ಸಾಕ್ಷಿದಾರರ ಹೆಸರು | : ಲಕ್ಷ್ಮಣಗೌಡ | ಪ್ರಾಸಾ-4 |
| ತಂದೆಯ ಹೆಸರು | : ಎಸ್.ಟಿ. ಪುಟ್ಟೆಗೌಡ | ಚಾಸಾ-7 |
| ವಯಸ್ಸು | : 52 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಎ.ಎಸ್.ಐ | ದಿನಾಂಕಃ17.02.2026. |
| ವಾಸಸ್ಥಳ | : ಹರಿಹರಪುರ ಪೋಲಿಸ್ ಠಾಣೆ. | |

**:ಮುಖ್ಯ ವಿಚಾರಣೆಃ ಪ್ರಾಜ್ಞ್ಯಾಸ.ಸ.ಅ. ರವರಿಂದ:**

ನಾನು ದಿನಾಂಕಃ.26.06.2019 ರಿಂದ ದಿ.31.08.2024 ರವರೆಗೂ ಬಣಕಲ್ ಪೋಲಿಸ್ ಠಾಣೆಯಲ್ಲಿ ಹೆಚ್.ಸಿ. ಆಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

ದಿ.09.02.2024 ರಂದು ಮ.3.45 ರ ಸಮಯಕ್ಕೆ ಚಾಸಾ-1 ರವರು ನೀಡಿದ ದೂರನ್ನು ಸ್ವೀಕರಿಸಿಕೊಂಡು, ಠಾಣಾ ಮೊ.ನಂ.8/2024 ರ ಕಲಂ 504, 341, 506, 427 IPC ರೀತ್ಯಾ ಪ್ರಕರಣವನ್ನು ದಾಖಲಿಸಿಕೊಂಡಿರುತ್ತೇನೆ. ನಂತರ ದಿ.11.02.2024 ರಂದು ಚಾಸಾ-2 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿ.12.02.2024 ರಂದು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿದ ಸ್ಥಳದಲ್ಲಿ ಹಾಜರಿ ಸಿಕ್ಕ ಚಾಸಾ-3 ಮತ್ತು 4 ರವರಿಗೆ ನೋಟೀಸನ್ನು ಜಾರಿ ಮಾಡಿರುತ್ತೇನೆ. ಸದರಿಯವರನ್ನು ಪಂಚಾಯ್ತಿದಾರರನ್ನಾಗಿ ಬರಮಾಡಿಕೊಂಡು, ಸ್ಥಳದಲ್ಲಿ ಇದ್ದ ಚಾಸಾ-1 ರವರು ಕೃತ್ಯ ನಡೆದ ಸ್ಥಳವನ್ನು ತೋರಿಸಿದ ಮೇರೆಗೆ ಕೃತ್ಯ ನಡೆದ ಸ್ಥಳದ ಮಹಜರ್ ಕ್ರಮವನ್ನು ಜರುಗಿಸಿರುತ್ತೇನೆ. ನಂತರ ಕೃತ್ಯ ನಡೆದ ಸ್ಥಳದಲ್ಲಿ ಒಂದು ಗ್ಯಾಸ್ ಪೈಪ್ ಮತ್ತು ಒಂದು ನೈಟಿಯನ್ನು ಅಮಾನತುಪಡಿಸಿಕೊಂಡಿರುತ್ತೇನೆ. ನಂತರ ಸದರಿ ಸ್ಥಳದ ಕಚ್ಚಾ ನಕಾಶೆಯನ್ನು ತಯಾರಿಸಿರುತ್ತೇನೆ. ಸದರ ಮಹಜರ್ ನ್ನು 17.00 ರಿಂದ 18.00 ಸಮಯದವರೆಗೂ ಬರವಣಿಗೆ ಮಾಡಿರುತ್ತೇನೆ. ನಂತರ ಠಾಣೆಗೆ ಬಂದು ಮಾಲು.ಪ.ಸಂ.10/2024 ರೀತಿಯಾ ದಾಖಲು ಮಾಡಿಕೊಂಡು ಸದರಿ ವಸ್ತುಗಳನ್ನು ಅಂತಿಮ ವರದಿಯನ್ನು ಸಲ್ಲಿಸುವ ವರೆಗೂ ಪೊಲೀಸ್ ವಶದಲ್ಲಿ ಇಟ್ಟುಕೊಳ್ಳಲು ಘನ ನ್ಯಾಯಾಲಯಕ್ಕೆ ಮನವಿ ಮಾಡಿಕೊಂಡಿರುತ್ತೇನೆ. ನಂತರ ದಿ.13.02.2024 ರಂದು ಆರೋಪಿಗೆ ಕಲಂ 41 ಎ Cr.P.C ರಡಿಯಲ್ಲಿ ನೋಟೀಸನ್ನು ಜಾರಿ ಮಾಡಿರುತ್ತೇನೆ. ನಂತರ ಚಾಸಾ-8 ರವರ ಆದೇಶದ ಮೇರೆಗೆ ಪ್ರಕರಣದ ಕಡತವನ್ನು ಚಾಸಾ-8 ರವರಿಗೆ ಹಸ್ತಾಂತರಿಸಿರುತ್ತೇನೆ.

ಸಾಕ್ಷಿಯು ನಿಪಿ-1 ಮತ್ತು 2 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1(ಎ) ಮತ್ತು 2(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-3 ರಿಂದ 5 ರಲ್ಲಿ ತಮ್ಮ ಇರುವಿಕೆಯ ಬಗ್ಗೆ ಗುರುತಿಸುತ್ತಾರೆ. ಸಿಡಿಯನ್ನು ನಿಪಿ-7 ಮತ್ತು ಕಲಂ 65 ಬಿ ರಡಿಯ ಪ್ರತಿಯನ್ನು ನಿಪಿ-8 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-7(ಎ) ಮತ್ತು 8(ಎ) ಎಂದು ಗುರುತಿಸಲಾಯಿತು. ದಿ.09.02.2024 ರಂದು ದಾಖಲಿಸಿಕೊಂಡ ಪ್ರ.ವ.ವರದಿಯನ್ನು ನೋಡಿ ಗುರುತಿಸಿದ್ದು, ಸದರಿ ವರದಿಯನ್ನು ನಿಪಿ-9 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಗ್ಯಾಸ್ ಪೈಪ್ ಮತ್ತು ನೈಟಿಯನ್ನು ದಿ.12.02.2024 ರಂದು ಮಹಜರ್ ಸಮಯದಲ್ಲಿ ಅಮಾನತುಪಡಿಸಿಕೊಂಡು ವಸ್ತುಗಳು ಎಂದು ನೋಡಿ ಗುರುತಿಸಿದ ಮೇರೆಗೆ ಸದರಿ ವಸ್ತುಗಳನ್ನು ಗುಲಾಬಿ ಬಣ್ಣದ ಪ್ಲಾಸ್ಟಿಕ್ ಕವರ್ ನ್ನು ಎಂ.ಒ.1, ಗ್ಯಾಸ್ ಪೈಪ್ ಎಂ.ಒ.2 ಮತ್ತು ಒಂದು ನೈಟಿಯನ್ನು ಎಂ.ಒ.3 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ಎಂ.ಒ.1(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಡಿ.ಎಸ್. ವಕೀಲರಿಂದಃ**

ಮಹಜರ್ ಗೆ ಹಾಜರಾಗುವ ಪೂರ್ವದಲ್ಲಿ ನಿಪಿ-1 ನುನ ಓದಿ ತಿಳಿದುಕೊಂಡಿರುತ್ತೇನೆ. ನಿಪಿ-1 ನ್ನು ನಾನೇ ಸ್ವೀಕರಿಸಿಕೊಂಡಿರುತ್ತೇನೆ. ಸದರಿ ದೂರಿನಲ್ಲಿ ರೂ.30,000/- ಹಣ ಬೆಲೆ ಬಾಳುವ ವಸ್ತುಗಳನ್ನು ಚೆಲ್ಲಾಪಿಲ್ಲಿ ಮಾಡಿರುವುದಾಗಿ ಬರೆಯಲಾಗಿರುತ್ತದೆ ಎಂದರೆ ಸರಿ. ನಾನು ಮಹಜರ್ ಕಾಲದಲ್ಲಿ ಸದರಿ ಬೆಲೆ ಬಾಳುವ ವಸ್ತುಗಳನ್ನು ಅಮಾನತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿ. ಮಹಜರ್ ಕಾಲದಲ್ಲಿ ಫೋಟೋವನ್ನು ತೆಗೆಯಲಾಗಿರುತ್ತದೆ. ನಿಪಿ-3 ಮತ್ತು 4 ನ್ನು ನಾನೇ ತೆಗೆದಿರುತ್ತೇನೆ ಎಂದರೆ ಸರಿ. ನಾನು ಸ್ಥಳಕ್ಕೆ ಹೋದಾಗ ಅಂಗಡಿ ಮತ್ತು ವಸ್ತುಗಳು ಯಾಥಾಸ್ಥಿತಿಯಲ್ಲಿ ಇತ್ತು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅಂಗಡಿಯ ಮುಂದೆ ತಿಂಡಿ ತಿನಿಸುಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು ಎಂದು ನುಡಿಯುತ್ತಾರೆ. ನಿಪಿ-3 ರಿಂದ 6 ನ್ನು ಒಂದೇ ದಿನ ಮತ್ತು ಒಂದೇ ಸಮಯದಲ್ಲಿ ತೆಗೆಯಲಾಗಿರುತ್ತದೆ ಎಂದರೆ ಸರಿ. ನಿಪಿ-3 ಮತ್ತು 4 ರಲ್ಲಿ ಅಂಗಡಿಯಲ್ಲಿ ಕಾಣುವ ವಸ್ತುಗಳು ನಿಪಿ-6 ರಲ್ಲಿ ಕಾಣುತ್ತಿಲ್ಲ ಎಂದರೆ ಸಾಕ್ಷಿಯು ನಿಪಿ-6 ನ್ನು ದೂರದಿಂದ ತೆಗೆಯಲಾಗಿರುತ್ತದೆ ಎಂದು ನುಡಿಯುತ್ತಾರೆ. ನಿಪಿ-3 ಮತ್ತು 4 ರಲ್ಲಿ ಕಾಣುವ ವಸ್ತುಗಳು ನಿಪಿ-6 ರಲ್ಲಿ ಕಾಣಿಸುತ್ತಿಲ್ಲ ಎಂದು ನುಡಿಯುತ್ತಾರೆ.

ನನ್ನ ಕಣ್ಣಿನ ದೃಷ್ಟಿ ಸರಿಯಿದೆ. ಪ್ರತೀ ವರ್ಷ ನನ್ನ ಕಣ್ಣಿನ ದೃಷ್ಟಿಯನ್ನು ಪರೀಕ್ಷಿಸಿಕೊಳ್ಳುತ್ತೇನೆ. ನಿಪಿ-3 ಮತ್ತು 4 ರಲ್ಲಿ ಅಂಗಡಿಯಲ್ಲಿ ಕಾಣಿಸುವ ತಿಂಡಿ ತಿನಿಸುಗಳನ್ನು ನಾವೇ ಚೆಲ್ಲಾಪಿಲ್ಲಿ ಮಾಡಿ ನಿಪಿ-6 ರ ಫೋಟೋವನ್ನು ತೆಗೆದಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-6 ರಲ್ಲಿ ಅಂಗಡಿಯ ಮುಂದೆ ಕಾಣುವ ಮಣ್ಣನ್ನು ಫೋಟೋವನ್ನು ತೆಗೆಯುವ ಸಮಯದಲ್ಲಿ ಮಾಡಲಾಗಿರುತ್ತದೆ ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ನಿಪಿ-6 ರಲ್ಲಿ ಪಿರ್ಯಾದುದಾರರು ಅಥವಾ ಸಿಬ್ಬಂಧಿಗಳ ಫೋಟೋ ಇರುವುದಿಲ್ಲ ಎಂದರೆ ಸರಿ. ನಾನು ಸ್ಥಳಕ್ಕೆ ಭೇಟಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಭೇಟಿ ನೀಡಿದ ಸಮಯದಲ್ಲಿ ಅಂಗಡಿಯ ತಿಂಡಿ ತಿನಿಸುಗಳನ್ನು ಹೊರಗೆ ಹಾಕಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-3 ರಿಂದ 6 ರಲ್ಲಿ ಎಂ.ಒ.2 ಮತ್ತು 3 ಬಿದ್ದಿರುವ ರೀತಿಯಲ್ಲಿ ಕಂಡುಬರುತ್ತಿಲ್ಲ ಎಂದರೆ ಸರಿ. ನಿಪಿ-2 ರ 2 ಮತ್ತು 3 ನೇ ಪುಟದಲ್ಲಿ ಪಿರ್ಯಾದುದಾರರ ಮತ್ತು ರಬ್ಬರ್ ಪೈಪ್ ಎಂದು ತಿದ್ದುಪಡಿ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ಚಾಸಾ-3 ಮತ್ತು 4 ರವರಿಂದ ಬಲವಂತವಾಗಿ ನಿಪಿ-2 ಕ್ಕೆ ಸಹಿಯನ್ನು ಪಡೆಯಲಾಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿಗೂ, ಈ ಪ್ರಕರಣಕ್ಕೂ, ಮುದ್ದೆಮಾಲುಗಳಿಗೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ನಿಪಿ-2 ರಿಂದ 6 ರಲ್ಲಿ ಗ್ಯಾಸ್ ಅಂಡೆಯು ಕಂಡುಬರುತ್ತಿಲ್ಲ ಎಂದರೆ ಸರಿ. ನಿಪಿ-6 ರಲ್ಲಿ ಚೆಲ್ಲಾಪಿಲ್ಲಿಯಾಗಿರುವ ವಸ್ತುಗಳನ್ನು ವಶಪಡಿಸಿಕೊಳ್ಳಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಸದರಿ ವಸ್ತುಗಳು ತಿಂಡಿ ತಿನಿಸುಗಳು ಆದ ಕಾರಣ ವಶಕ್ಕೆ ಪಡೆದಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಯಾವುದೇ ಮಹಜರ್ ಕ್ರಮವನ್ನು ಜರುಗಿಸದಿದ್ದರು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.

**<u>1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ</u>**

**<u>ಸಿ.ಸಿ.2200/2024</u>**

| | | |
|---|---|---|
| ಸಾಕ್ಷಿದಾರರ ಹೆಸರು | : ಸಂದೀಪ್ | ಪ್ರಾಸಾ-5 |
| ತಂದೆಯ ಹೆಸರು | : ಚಂದ್ರೇಗೌಡ | ಚಾಸಾ-3 |
| ವಯಸ್ಸು | : 40 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಕೂಲಿ | ದಿನಾಂಕಃ 17.02.2026. |
| ವಾಸಸ್ಥಳ | : ಬಕ್ಕೀ | |

**<u>:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:</u>**

ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ನನಗಿದೆ. ಚಾಸಾ-1, 2 ಮತ್ತು 4 ರವರ ಪರಿಚಯ ನನಗಿದೆ.

ಸಾಕ್ಷಿಯು ನಿಪಿ-2 ರ ಮಹಜರ್ ನಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದು, ಸದರಿ ಸಹಿಯನ್ನು ನಿಪಿ-2(ಡಿ) ಎಂದು ಗುರುತಿಸಲಾಯಿತು. ನಿಪಿ-3 ರಿಂದ 5 ರ ಪೋಟೋದಲ್ಲಿ ತಮ್ಮ ಇರುವಿಕೆಯ ಬಗ್ಗೆ ಗುರುತಿಸುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಎಂ.ಒ.1 ರ ಮೇಲಿನ ತಮ್ಮ ಸಹಿಯನ್ನು ಗುರುತಿಸಿದ್ದು ಸದರಿ ಸದರಿ ಸಹಿಯನ್ನು ಎಂ.ಒ.1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಎಂ.ಒ.2 ಮತ್ತು 3 ನ್ನು ಈ ಹಿಂದೆ ನೋಡಿರುವುದಿಲ್ಲ ಎಂದು ನುಡಿಯುತ್ತಾರೆ.

ನಿಪಿ-2 ರ ಮೇಲೆ ಯಾವಾಗ ಸಹಿ ಮಾಡಿರುತ್ತೇನೆ ಎಂದು ನನಗೆ ನೆನಪಿರುವುದಿಲ್ಲ. ಸದರಿ ಸಹಿಯನ್ನು ಪೋಲಿಸರ ಕೋರಿಕೆಯ ಮೇರೆಗೆ ಮಾಡಿರುತ್ತೇನೆ. ನಿಪಿ-2 ರಲ್ಲಿ ಏನನ್ನು ಬರೆಯಲಾಗಿದೆ ಎಂದು ನಾನು ಓದಿ ತಿಳಿದುಕೊಂಡಿರುವುದಿಲ್ಲ ಮತ್ತು ಪೋಲಿಸರು ನನಗೆ ಓದಿ ತಿಳಿಸಿರುವುದಿಲ್ಲ. ಪೋಲಿಸರು ಬಂದಿರುವುದಾಗಿ ಗುರುತಿಸುವ ಕಾರಣ ಸಹಿ ಮಾಡಲು ಕೇಳಿದ ಕಾರಣ ನಿಪಿ-2 ಕ್ಕೆ ಸಹಿ ಮಾಡಿರುತ್ತೇನೆ. ನಿಪಿ-3 ರಿಂದ 6 ನ್ನು ಬಕ್ಕೀ ಗ್ರಾಮದ ಚಾಸಾ-2 ರವರ ಅಂಗಡಿಯ ಬಳಿ ತೆಗೆಯಲಾಗಿರುತ್ತದೆ. ಇದನ್ನು ಹೊರತುಪಡಿಸಿ ನನಗೆ ಇನ್ಯಾವುದೇ ಮಾಹಿತಿ ಇರುವುದಿಲ್ಲ. ಯಾವ ವಿಚಾರಕ್ಕೆ ನಮ್ಮ ಸಹಿಯನ್ನು ಪಡೆದು ಪೋಟೋಗಳನ್ನು ತೆಗೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ನಾವು ಸಹಿ ಮಾಡುವ ಕಾಲಕ್ಕೆ ಎಂ.ಒ.1 ಮತ್ತು 2 ರ ವಸ್ತುವನ್ನು ನೋಡಿಲ್ಲ.ನಿಪಿ-2 ಕ್ಕೆ ಸಹಿ ಮಾಡುವ ಕಾಲದಲ್ಲಿ ಯಾರು ಹಾಜರಿದ್ದರು ಮತ್ತು ಯಾವ ಸಮಯಕ್ಕೆ ಸಹಿ ಮಾಡಿರುತ್ತೇನೆ ಎಂದು ನನಗೆ ನೆನಪಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾ ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**<u>ಪಾಟೀ ಸವಾಲು: ಪ್ರಾಜ್ಞ್ಯಾ ಸ.ಸ.ಅ. ರವರಿಂದ:</u>**

ದಿ.12.02.2024 ರಂದು ಸ.5.00 ರಿಂದ 6.00 ರ ಸಮಯದಲ್ಲಿ ಬಕ್ಕೀ ಗ್ರಾಮದ ಚಾಸಾ-1 ರವರ ಅಂಗಡಿಯ ಬಳಿ ನಿಪಿ-2 ಕ್ಕೆ ಸಹಿ ಮಾಡಿರುತ್ತೀರ ಎಂದರೆ ನನಗೆ ತಿಳಿದಿರುವುದಿಲ್ಲ. ಆ ದಿನ

ಚಾಸಾ-1 ರವರ ಅಂಗಡಿಗೆ ನ್ಯಾಯಾಲಯದ ಮುಂದಿರುವ ಆರೋಪಿಯು ಅಂಗಡಿಗೆ ನುಗ್ಗಿ, ಅವಾಚ್ಯ ಶಬ್ದದಿಂದ ಬೈದು ಧ್ವಂಸ ಮಾಡಲು ಪ್ರಯತ್ನಿಸಿದ ಬಗ್ಗೆ ತಯಾರಿಸಿದ ಮಹಜರ್ ಪ್ರತಿಗೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಚಾಸಾ-1 ರವರು ತಾವು ಧರಿಸಿದ್ದ ನೈಟಿ ಮತ್ತು ಒಂದು ಗ್ಯಾಸ್ ಪೈಪ್ ನ್ನು ಪೋಲಿಸರ ವಶಕ್ಕೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ನಿಪಿ-3 ರಿಂದ 5 ನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

ನನಗೆ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ತಿಳಿದಿದ್ದರೂ ಸಹಾ ಆರೋಪಿಯು ನಮ್ಮ ಊರ ಮನೆಯವರಾದ ಕಾರಣ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿ ಪರ ಶ್ರೀ ಡಿ.ಎಸ್. ವಕೀಲರಿಂದಃ**

ಚಾಸಾ-2 ರವರ ಅಂಗಡಿಯ ಬಳಿ ನಾನು ಫೋಟೋವನ್ನು ತೆಗೆದಿರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.